ಸಂಖ್ಯೆ:ಸಿಬ್ಬಂದಿ(1)/16/2020.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಕಮಾಂಡೆಂಟ್ ರವರ ಕಛೇರಿ,
11ನೇ ಪಡೆ, ಕೆ.ಎಸ್.ಆರ್.ಪಿ.
ಶಾಂತಿಗ್ರಾಮ ಹಾಸನ- 573220
ದಿನಾಂಕ: 11/08/2021

**ಕಮಾಂಡೆಂಟ್, 11ನೇ ಪಡೆ, ಕೆ.ಎಸ್.ಆರ್.ಪಿ, ಹಾಸನ ಘಟಕಕ್ಕೆ ಸಂಬಂಧಿಸಿದ ವಿಶೇಷ ಮೀಸಲುಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ಭಾಗಶಃ(10) ರ ಅಂತಿಮ ಆಯ್ಕೆಪಟ್ಟಿ.**

**ವಿಷಯಃ** 11ನೇ ಪಡೆ, ಕೆ.ಎಸ್.ಆರ್.ಪಿ.ಯ ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಯ (ಭಾಗಶ:-10) ರ ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖಃ**
1 ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/188/ಪೊಸಿಅ/2018 ದಿನಾಂಕ:06/05/2020.
2 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 28/03/2020.
3 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 11/2/2021.
4 ಪ್ರಥಮ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ದಿನಾಂಕ:23/02/2021.
5 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 21/04/2021.
6 ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ದಿನಾಂಕ:05/05/2021.

******

ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್, ಕೆ.ಎಸ್.ಆರ್.ಪಿ ಹುದ್ದೆಗಳ ನೇಮಕಾತಿಯನ್ನು ಉಲ್ಲೇಖ(2)ರ ಅಧಿಸೂಚನೆಯನ್ವಯ ಅಧಿಸೂಚಿಸಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/188/ಪೊಸಿಅ/2018 ದಿನಾಂಕ:06/05/2020 ರಲ್ಲಿನ ನಿಯಮಗಳಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖಿತ ಪತ್ರದನ್ವಯ ಪ್ರಕಟಿಸಿದ ನಂತರ ಸದರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ನಂತರ ನಿಯಮಾನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ವೈದ್ಯಕೀಯ ಪರೀಕ್ಷೆ ಪೂರ್ಣಗೊಂಡ ನಂತರ ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಿಮ್ಸ್ ಹಾಸನ ರವರು ನೀಡಿದ ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹಗೊಂಡ, ಗೈರು ಹಾಜರಾದ, ಕೆ.ಎಸ್.ಆರ್.ಪಿ. ಪಿ.ಸಿ ಹುದ್ದೆಗೆ ಇಚ್ಛೆ ಇಲ್ಲವೆಂದು ಲಿಖಿತ ಮನವಿ ಸಲ್ಲಿಸಿದ ಹಾಗೂ ನಕಲಿ ಅಭ್ಯರ್ಥಿ ಸೇರಿದಂತೆ 51 ಅಭ್ಯರ್ಥಿಗಳನ್ನು ಪ್ರಥಮ ತಾತ್ಕಾಲಿಕ ಆಯ್ಕೆಪಟ್ಟಿಯಿಂದ ಕೈಬಿಟ್ಟು ಸದರಿ ಅಭ್ಯರ್ಥಿಗಳ ಬದಲಾಗಿ ಅರ್ಹರಿರುವ 51 ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಪರಿಷ್ಕೃತ ತಾತ್ಕಾಲಿಕ ಪಟ್ಟಿಯಲ್ಲಿ ಪರಿಗಣಿಸಿ ಆಯ್ಕೆಪಟ್ಟಿಯನ್ನು ಉಲ್ಲೇಖ-6 ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ, ಗುಣ ಮತ್ತು ನಡತೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಆದುದರಿಂದ ದಾಖಲಾತಿ ಪರಿಶೀಲನೆ ಪೂರ್ಣಗೊಂಡ ಅಭ್ಯರ್ಥಿಗಳ ದಾಖಲಾತಿಗಳ ನೈಜ್ಯತಾ ವರದಿ ಮತ್ತು ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ವೈದ್ಯಕೀಯ ವರದಿ ಆಧರಿಸಿ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಕೆ.ಎಸ್.ಆರ್.ಪಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಹಾಗೂ ಮೀಸಲಾತಿಯನುಸಾರ ಅರ್ಹ ಅಭ್ಯರ್ಥಿಗಳಿಗೆ ಕಮಾಂಡೆಂಟ್, 11ನೇ ಪಡೆ, ಕೆ.ಎಸ್.ಆರ್.ಪಿ ಘಟಕದ (ಭಾಗಶಃ-10)ರ ಅಂತಿಮ ಆಯ್ಕೆಪಟ್ಟಿಯನ್ನು ತಯಾರಿಸಿ, ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ. ಈ ಭಾಗಶಃ-10 ರ ಅಂತಿಮ ಆಯ್ಕೆಪಟ್ಟಿಯು ಘನ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ಘನ ಉಚ್ಛ ನ್ಯಾಯಾಲಯ/ಘನ ಭಾರತದ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

| SL. NO | APP NO | ROLL NO | NAME | MARKS | SELECTION CATEGORY | CAT |
|---|---|---|---|---|---|---|
| 1. | 8403122 | 3248285 | SANTHOSHA M N | 80.25 | FINAL_11BTNHASSAN_GM_RUR_3 | 3A |
| 2. | 8414515 | 3118515 | HUVANNA ACCHAGAON | 80 | FINAL_11BTNHASSAN_GM_RUR_5 | 2A |
| 3. | 8401028 | 3235874 | SANTHOSHA G | 78.5 | FINAL_11BTNHASSAN_GM_OTH_8 | 2A |
| 4. | 8410338 | 3111241 | SIDDAPPA | 78.25 | FINAL_11BTNHASSAN_GM_RUR_16 | 2A |
| 5. | 8408922 | 3224747 | MANJUNATHA M | 76.75 | FINAL_11BTNHASSAN_GM_RUR_30 | CAT-1 |
| 6. | 8417158 | 3299611 | SUNIL REVANNAVAR | 73 | FINAL_11BTNHASSAN_3B_RUR_1 | 3B |
| 7. | 8405628 | 3241176 | VASANTHAKUMARA MS | 73 | FINAL_11BTNHASSAN_SC_KAN_1 | SC |
| 8. | 8402281 | 3245604 | YASHWANTHA M H | 70.5 | FINAL_11BTNHASSAN_SC_RUR_7 | SC |
| 9. | 8408175 | 3171129 | RAJESAB MULLA | 70.5 | FINAL_11BTNHASSAN_2B_RUR_3 | 2B |
| 10. | 8404720 | 3203216 | MAHADEV YALASHETTI | 69.75 | FINAL_11BTNHASSAN_3B_PDP_1 | 3B |

**ಟಿಪ್ಪಣಿ:**

1) ಈ ಭಾಗಶಃ -10 ರ ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆಯು ಪ್ರವರ್ಗ ಮತ್ತು ಘಟಕಕ್ಕೆ ಹಂಚಿಕೆ ಮಾಡಲಾದ ಹುದ್ದೆಗಳು ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಕೆಲವು ಅಭ್ಯರ್ಥಿಗಳ ಅನರ್ಹತೆಯ ಕಾರಣಗಳಿಂದ ಕ್ರೋಢೀಕೃತ ಆಯ್ಕೆ ಪಟ್ಟಿಯು ಪರಿಷ್ಕರಣೆಯಾದಲ್ಲಿ ಸದರಿ ಆಯ್ಕೆಪಟ್ಟಿಯಲ್ಲಿ ಬದಲಾವಣೆಯಾಗುವ ಪ್ರವರ್ಗಗಳನುಸಾರ ಘಟಕದ ಬದಲಾವಣೆಯ ಷರತ್ತುಗಳಿಗೆ ಒಳಪಟ್ಟಿರುತ್ತದೆ.
2) ಕಮಾಂಡೆಂಟ್ ಮತ್ತು ಅಧ್ಯಕ್ಷರು, ಸ್ಪೆ.ಆರ್.ಪಿ.ಸಿ ನೇಮಕಾತಿ ಸಮಿತಿ, 11ನೇ ಪಡೆ, ಕೆ.ಎಸ್.ಆರ್.ಪಿ, ಹಾಸನ ರವರ ನೇತೃತ್ವದಲ್ಲಿ **ದಿನಾಂಕ:11/08/2021** ರಂದು ಆಯೋಜಿಸಲಾದ ನೇಮಕಾತಿ ಪ್ರಕ್ರಿಯೆ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಮೇಲ್ಕಂಡ 10 ಅಭ್ಯರ್ಥಿಗಳನ್ನು ಭಾಗಶಃ-10 ರ ಅಂತಿಮ ಆಯ್ಕೆಪಟ್ಟಿಗೆ ಪರಿಗಣಿಸಲಾಗಿದ್ದು, ಅದರಂತೆ, ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿರುತ್ತದೆ. ಉಳಿದಂತೆ ಒಟ್ಟು 84 ಅಭ್ಯರ್ಥಿಗಳ ಸಿಂಧುತ್ವ, ಗುಣ, ನಡತೆ, ಹಾಗೂ ಇತರೆ ದಾಖಲೆಗಳ ಪರಿಶೀಲನಾ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ವೀಕರಿಸಿದ ನಂತರ ಪರಿಷ್ಕೃತ ಕ್ರೂಢೀಕೃತ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು.

(ಪ್ರವೀಣ್ ಆಳ್ವ)
ಅಧ್ಯಕ್ಷರು,
11ನೇ ಪಡೆ, ಕೆಎಸ್ಆರ್‌ಪಿ,
ಸ್ಪೆಷಲ್.ಆರ್.ಪಿ.ಸಿ ಸೆಲೆಕ್ಷನ್ ಅಥಾರಿಟಿ ಮತ್ತು
ಕಮಾಂಡೆಂಟ್, 11ನೇ ಪಡೆ, ಕೆಎಸ್ಆರ್‌ಪಿ,
ಹಾಸನ.

(ಆರ್.ಅರವಿಂದ)
ಸದಸ್ಯರು,
ಸ್ಪೆಷಲ್.ಆರ್.ಪಿ.ಸಿ ಸೆಲೆಕ್ಷನ್ ಅಥಾರಿಟಿ
ಮತ್ತು ಸಹಾಯಕ ಕಮಾಂಡೆಂಟ್.(ಅಡ್ಮ)
11ನೇ ಪಡೆ, ಕೆಎಸ್ಆರ್‌ಪಿ, ಹಾಸನ.

ಸದಸ್ಯ ಕಾರ್ಯದರ್ಶಿ,
ಸ್ಪೆಷಲ್.ಆರ್.ಪಿ.ಸಿ ಸೆಲೆಕ್ಷನ್ ಅಥಾರಿಟಿ
ಮತ್ತು ಪ್ರಭಾರ ಸಹಾಯಕ ಆಡಳಿತಾಧಿಕಾರಿ,
11ನೇ ಪಡೆ, ಕೆಎಸ್ಆರ್‌ಪಿ, ಹಾಸನ.